<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು</u>

<u>ಸಿ.ಸಿ.ನಂ.**51/2015.**</u>

ದಿನಾಂಕಃ**14-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಗೋಪಾಲ್ | ಚಾಸಾ-14<br>ಪ್ರಾಸಾ-12 |
| ತಂದೆಯ ಹೆಸರು | ಲೇಟ್ ತಿಮ್ಮಪ್ಪ | |
| ವಯಸ್ಸು (ವರ್ಷಗಳಲ್ಲಿ) | 46 | |
| ಉದ್ಯೋಗ | ಹೆಚ್ ಸಿ 107 – ಕಡೂರು ಪೊ.ಠಾಣೆ | |
| ವಾಸ | ಕಡೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು 2012 ರಿಂದ 2018 ರ ವರೆಗೂ ಕಡೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ನಿರ್ವಹಿಸಿದ್ದೆ. ದಿನಾಂಕ 06.01.2013 ರಂದು ಚಾಸಾ 17 ರವರು ರಹದಾರಿ ಪತ್ರ ನೀಡಿ ಬೆಂಗಳೂರಿನ ಎಫ್ ಎಸ್ ಎಲ್ ಗೆ ಹೋಗಿ ಕೇಸಿನ ದಾಖಲೆಗಳನ್ನು ಕೊಟ್ಟು ಬರಲು ಕಳುಹಿಸಿಕೊಟ್ಟಿದ್ದು, ಅದರಂತೆ ನಾನು ದಿಃ08.01.2013 ರಂದು ಬೆಂಗಳೂರಿನ ಎಫ್ ಎಸ್ ಎಲ್ ಗೆ ಹೋಗಿ ದಾಖಲೆಗಳನ್ನು ನೀಡಿ ವಾಪಾಸು ಬಂದು ಠಾಣೆಗೆ ಬಂದು ವರದಿ ಮಾಡಿಕೊಂಡಿರುತ್ತೇನೆ.

<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ಬಿ ಆರ್ ವಕೀಲರಿಂದಃ</u>

ನನಗೆ ಕವರಿಂಗ್ ಲೇಟರ್ ಅನ್ನು ಮಾತ್ರ ಸೀಲ್ ಮಾಡಿ ಕೊಟ್ಟಿರುತ್ತಾರೆ. ಆ ದಿನ ನಾನು ಒಬ್ಬನೇ ದಿಃ08.01.2013 ರ ಬೆಳಗ್ಗೆ ಸುಮಾರು 12 ಗಂಟೆಗೆ ಎಫ್ ಎಸ್ ಎಲ್ ಬೆಂಗಳೂರಿಗೆ ತಲುಪಿಸಿರುತ್ತೇನೆ. ನನಗೆ ಬೆಂಗಳೂರಿಗೆ ಹೋಗಿ ಬರಲು ದಿಃ06.01.2013 ರಂದು ಪಾಸ್ ಪೋರ್ಟ್ ನೀಡಿ ತಿಳಿಸಿರುತ್ತಾರೆ. ನನಗೆ 2 ದಿನಗಳ ಒಳಗೆ ಎಫ್ ಎಸ್ ಎಲ್ ಗೆ ದಾಖಲೆಗಳನ್ನು ಕೊಟ್ಟು ಬರಲು ತಿಳಿಸಿದ್ದರು. ನಾವು ಹೋಗಿ ಬರಲು ನಮಗೆ ಪಾಸ್ ಪೋರ್ಟ್ ಮತ್ತು ಬಸ್ಸು ವಾರಂಟ್ ಅನ್ನು ನೀಡುತ್ತಾರೆ. ನಾನು 09.01.2013 ರಂದು ಠಾಣೆಗೆ ವರದಿ ಮಾಡಿಕೊಂಡಿರುತ್ತೇನೆ. ನಾನು ಎಫ್ ಎಸ್ ಎಲ್ ಗೆ ದಾಖಲೆಗಳನ್ನು ನೀಡಿದ ಬಗ್ಗೆ ಹಿಂಬರಹವನ್ನು ನೀಡಿರುತ್ತಾರೆ. ನಾನು ಸದರಿ ಹಿಂಬರಹವನ್ನು ಮೇಲಾಧಿಕಾರಿಯವರಿಗೆ ನೀಡಿರುತ್ತೇನೆ. ನಾನು ನನಗೆ ನೀಡಿದ ಪಾಸ್ ಪೋರ್ಟ್ ಮತ್ತು

ಬಸ್ಸು ವಾರಂಟ್ ಅನ್ನು ಸಹ ವಾಪಾಸು ನೀಡಿರುತ್ತೇನೆ. ನಾವು ಹೋಗಿ ಬರಲು ಮುಂಚಿತವಾಗಿಯೇ ಇಂತಹ ದಿನವೇ ಹೋಗಿ-ಬರಬೇಕು ಎಂದು ನಮೂದು ಮಾಡಿ ಕೊಡುವುದಿಲ್ಲ. ಬಸ್ಸು ವಾರಂಟ್ ಗಳಿಗೆ ನಾವು ಯಾವ ದಿನಾಂಕ ಹೋಗುತ್ತೇವೆ ಆ ದಿನಾಂಕವನ್ನು ನಮೂದು ಮಾಡಿಕೊಳ್ಳುತ್ತೇವೆ. ಠಾಣಾಧಿಕಾರಿಯವರು ನಮಗೆ ಪಾಸ್ ಪೋರ್ಟ್ ನೀಡಿದ ದಿನಾಂಕವನ್ನು ನಮೂದು ಮಾಡುತ್ತಾರೆ.

ಯಾವುದೇ ಒಬ್ಬ ಸಿಬ್ಬಂದಿಗೆ ಕೆಲಸದ ನಿಮಿತ್ತವಾಗಿ ಬೇರೆ ಕಡೆ ಕಳುಹಿಸಬೇಕಾದರೆ ಠಾಣಾಧಿಕಾರಿಯುವರು ಪಾಸ್ ಪೋರ್ಟ್ ನಲ್ಲಿ ಇಂತಹ ದಿನ ಹೋಗಿ ಇಂತಹ ದಿನಾಂಕದಂದೇ ಬರಬೇಕು ಎಂದು ನಮೂದು ಮಾಡಿ ಕೊಡುವ ಕ್ರಮ ಇದೆ ಎಂದರೆ ಸರಿಯಲ್ಲ. ಠಾಣಾಧಿಕಾರಿಗಳು ಎಫ್ ಎಸ್ ಎಲ್ ಗೆ ಕಳುಹಿಸುವಾಗ ಮೇಲಾಧಿಕಾರಿಗಳ ಸಹಿಗಳನ್ನು ಪಾಸ್ ಪೋರ್ಟ್ ಗೆ ಮತ್ತು ಬಸ್ಸು ವಾರಂಟ್ ಗೆ ಪಡೆದುಕೊಂಡು ನಂತರ ನಮಗೆ ನೀಡುವ ಕ್ರಮ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಎಫ್ ಎಸ್ ಎಲ್-ಗೆ ಹೋಗುವ ಸಲುವಾಗಿ ಸಂಬಂಧಪಟ್ಟ ಮೇಲಾಧಿಕಾರಿಯವರ ಸಹಿ ಪಡೆದುಕೊಂಡು ಹೋಗಲು ತಿಳಿಸಿದ್ದರು ಎಂದು ನುಡಿಯುತ್ತಾರೆ. ಮೇಲಾಧಿಕಾರಿಯವರ ಸಹಿ ಪಡೆದುಕೊಂಡು ಹೋಗಬೇಕು ನನಗೆ ಲಿಖಿತವಾಗಿ ಪಾಸ್ ಪೋರ್ಟಿನಲ್ಲಿ ನಮೂದು ಮಾಡಿ ಹೇಳಿರುತ್ತಾರೆ. ಸದರಿ ಬರೆದಂತಹಃ ಪಾಸ್ ಪೋರ್ಟ್ ಅನ್ನು ನಾನು ವಾಪಾಸು ಮೇಲಾಧಿಕಾರಿಯವರಿಗೆ ನೀಡಿರುತ್ತೇನೆ.

ನನಗೆ ಚಾಸಾ 17 ರವರು ಯಾವುದೇ ದಾಖಲೆ ನೀಡಿರುವುದಿಲ್ಲ ಹಾಗೂ ನಾನು ಯಾವುದೇ ದಾಖಲೆಯನ್ನು ಎಫ್ ಎಸ್ ಎಲ್- ಬೆಂಗಳೂರಿಗೆ ಹೋಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಳಗ್ಗೆ ಸುಮಾರು 5.30 ಗಂಟೆಗೆ ಕಡೂರಿನಿಂದ ಬಿಟ್ಟು ಬೆಳಗ್ಗೆ 11.30 ಗಂಟೆಗೆ ಬೆಂಗಳೂರಿಗೆ ತಲುಪಿ ನಂತರ ಮಡಿವಾಳ ಎಫ್ ಎಸ್ ಎಲ್ ಕಛೇರಿಗೆ 12 ಗಂಟೆಗೆ ತಲುಪಿರುತ್ತೇನೆ. ನಾನು ಬೆಂಗಳೂರು ನಗರದಲ್ಲಿಯೂ ಬಸ್ಸಿನಲ್ಲಿ ಪ್ರಯಾಣ ಮಾಡಿರುತ್ತೇನೆ. ನಾನು ಬೆಂಗಳೂರು ನಗರದಲ್ಲಿ ಹೋದ ಬಸ್ಸಿನಲ್ಲಿ ಬಸ್ಸು ವಾರಂಟ್ ಮತ್ತು ನನ್ನ ಐ ಡಿ ಕಾರ್ಡ್ ಅನ್ನು ತೋರಿಸಿರುತ್ತೇನೆ. ನಮಗೆ ಐ ಡಿ ಕಾರ್ಡ್ ತೋರಿಸಿ ರಾಜ್ಯದಲಿ ಎಲ್ಲಿ ಬೆಕೆಂದರಲ್ಲಿ ಓಡಾಡಲು ಅವಕಾಶ ಇರುವುದಿಲ್ಲ ಆದರೆ ಬೆಂಗಳೂರು

ಸಿಟಿಯಲ್ಲಿ ಓಡಾಡಬಹುದು. ಆ ರೀತಿ ಓಡಾಡಲು ನಮಗೆ ಕಮಿಷನರ್ ಹೆಡ್ ಅನುಮತಿ ಇರುತ್ತದೆ, ಆದರೆ ಸರ್ಕಾರದಿಂದ ಅನುಮತಿ ಇರುವುದಿಲ್ಲ. ಐಡಿ ಕಾರ್ಡ್ ತೋರಿಸಿ ಉಚಿತವಾಗಿ ಪ್ರಯಾಣಿಸಲು ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೆಲಸದ ನಿಮಿತ್ತ ಸಮವಸ್ತ್ರದಲ್ಲಿ ಹೋದಾಗ ಅವಕಾಶನೀಡಲಾಗಿದೆ ಎಂದು ನುಡಿಯುತ್ತಾರೆ. ನನಗೆ ಆ ರೀತಿಯಾ ಯಾವುದೇ ಸೌಲಭ್ಯ ಇಲ್ಲದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆಸ ರಿಯಲ್ಲ.

ನಾನು ಮೇಲಾಧಿಕಾರಿಯವರ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.